ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

<u>ಸಿ.ಸಿ ನಂಃ **1690/2023**</u>

| | | |
|---|---|---|
| ಸಾಕ್ಷಿಯ ಹೆಸರುಃ | ರಾಧಿಕಾ | ಫ್ರಾಸಾಃ 1 |
| ಗಂಡನ/ತಂದೆಯ ಹೆಸರುಃ | ಜನಾರ್ಧನ | ಚಾಸಾಃ 1 |
| ವಯಸ್ಸುಃ | 33 ವರ್ಷ | ದಿಃ 20-06-2024 |
| ಉದ್ಯೋಗಃ | ಅಂಗನವಾಡಿ ಕಾರ್ಯಕರ್ತೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ದುಪ್ಪಲ್ಲಿ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>

ನನಗೆ ಚಾಸಾಃ 4 ರಿಂದ 7 ರವರು ಹಾಗೂ ಆರೋಪಿತನ ಪರಿಚಯವಿದೆ. ಚಾಸಾಃ 8 ರವರ ಪರಿಚಯವಿದೆ. ಚಾಸಾಃ 9 ರವರು ನನ್ನ ಗಂಡ. ದಿನಾಂಕಃ 29-12-2022 ರಂದು3.00 ಗಂಟೆಗೆ ನಾನು ಅಂಗನವಾಡಿಯಲ್ಲಿ ಕೆಲಸ ಮಾಡುತ್ತಿರುವಾಗ ಆರೋಪಿತನು ಬಂದು ರೇಷನ ಕೊಡು ಎಂದು ನನಗೆ ಕೇಳಿದಾಗ ನಾನು ರೇಷನ ಕೊಡಲು ಬರುವುದಿಲ್ಲ ಮಕ್ಕಳಿಗೆ ಮಾತ್ರ ಬಂದಿರುತ್ತದೆ ಎಂದು ಹೇಳಿರುತ್ತೇನೆ. ಆಗ ಆರೋಪಿತನು ಯಾಕೆ ಕೊಡುವುದಿಲ್ಲ ಎಂದು ಹೇಳಿ ನಿಮ್ಮ ಅಪ್ಪನ ಮನೆಯಿಂದ ತಂದಿದಿಯಾ ಎಂದು ಹೇಳಿ ನನ್ನ ಮೈ ಮೇಲೆ ಬಂದಿರುತ್ತಾನೆ. ಆರೋಪಿತನು ನನಗೆ ಗೋಡೆಗೆ ದಬ್ಬಿರುತ್ತಾನೆ. ನನಗೆ ಅಂಗನವಾಡಿಯಿಂದ ಖಾಲಿ ಮಾಡಲು ಹೇಳಿರುತ್ತಾನೆ. ಆರೋಪಿತನು ನನ್ನ ಕೈ ಹಿಡಿದು ಎಳೆದುಕೊಂಡು ಕರೆದುಕೊಂಡು ದಬ್ಬಿರುತ್ತಾನೆ. ನನ್ನ ಎಡಗೈ ಹೆಬ್ಬೆಟ್ಟನು ಬಾಯಿಂದ ಕಡಿದಿರುತ್ತಾನೆ. ಸದರಿ ನಾನು ಹೊರಗೆ ಹೋಗದಂತೆ ಅಡ್ಡಗಟ್ಟಿ ನಿಲ್ಲಿಸಿರುತ್ತಾನೆ ನನಗೆ ಜೀವ ಬೆದರಿಕೆಯನ್ನು ಹಾಕಿರುತ್ತಾನೆ. . ನನ್ನ ಸೀರೆ ಹಿಡಿದು ಎಳೆದಾಡಿ ನನಗೆ ಹೊಡೆದಿರುತ್ತಾನೆ. ಚಾಸಾಃ 4 ರಿಂದ 8 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಾನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ನನ್ನ ಗಂಡನಿಗೂ ಕೂಡ ತಿಳಿಸಿರುತ್ತೇನೆ. ನಂತರ ಸೈದಾಪೂರ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ನಾನು ಆಸಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ದಿನಾಂಕಃ 30-12-2022 ರಂದು ಪೊಲಿಸರು ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ.

ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೋವನ್ನು ಸಾಕ್ಷಿಯು ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಪಾಟಿ ಸವಾಲು ಃಆರೋಪಿ ಪರ ಶ್ರೀ ಸಿ. ಎ. ವಕೀಲರಿಂದಃ

**1.** ನಾನು ಸುಮಾರು **14** ವರ್ಷದಿಂದ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ತವರು ಮನೆ ದುಪ್ಪದಲ್ಲಿ ನನ್ನ ಗಂಡನ ಮನೆ ಕುನ್ಸಿ, ಸದರಿ ನನ್ನ ಅಂಗನವಾಡಿಯಲ್ಲಿ ಮಕ್ಕಳ ಪಾಲನೆ, ಪೋಷಣೆ ಮತ್ತು ಆಹಾರ ಸಾಮಾಗ್ರಿ ವಿತರಣೆ ಮಾಡುವ ಕೆಲಸ ಇರುತ್ತದೆ. ಸದರಿ ಮೂರು ಅಂಗನವಾಡಿಯ ರೇಷನನ್ನು ನಮ್ಮ ಅಂಗನವಾಡಿಯಲ್ಲಿಯೇ ಇಳಿಸುತ್ತಾರೆ. ಸದರಿ ಲಾರಿ **1.00** ಗಂಟೆಗೆ ಅಂಗನವಾಡಿಗೆ ಬಂದು ಇಳಿಸಿ ಹೋಗಿರುತ್ತಾರೆ. ಸದರಿ ಸಾಮಾಗ್ರಿಗಳನ್ನು ಇಳಿಸಲು ಅರ್ಧ ಗಂಟೆ ಸಮಯಾವಕಾಶ ಬೇಕಾಯಿತು. ನನಗೆ ಲಾರಿ ನಂಬರ ಹೇಳಲು ಬರುವುದಿಲ್ಲ. ಸದರಿ ಊರಲ್ಲಿರುವ ಗರ್ಭಿಣಿಯರಿಗೆ ರೇಷನ ಕಿಟ್ಟು ಕೊಡುವ ನನ್ನ ಕರ್ತವ್ಯ ಇರುತ್ತದೆ ಎಂದರೆ ಸರಿ. ಸದರಿ ಆರೋಪಿತನ ಮಗಳು ಲಕ್ಷ್ಮೀ ಇವಳು ಗರ್ಭಿಣಿಯಾಗಿದ್ದರಿಂದ ನನಗೆ ರೇಷನ ಕಿಟ್ಟು ಕೇಳಿರುತ್ತಾಳೆ ಎಂದರೆ ಸಾಕ್ಷಿಯು ಅವಳು ಗಂಡನ ಮನೆಯಲ್ಲಿ ಇರುವುದರಿಂದ ಇಲ್ಲಿ ಕೊಡಲು ಬರುವುದಿಲ್ಲ ಎಂದು ಹೇಳಿರುತ್ತೇನೆ. ಸದರಿ ಆರೋಪಿತನು ರೇಷನ ಕಿಟ್ಟು ನೀಡಲು ವಿನಂತಿ ಮಾಡಿದರೂ ಸಹಿತ ನಾನು ಬೆದರಿಕೆ ಹಾಕಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೋಷಣ ಟ್ರ್ಯಾಕರ ಆಪ್ ನಲ್ಲಿ ನಮೂದು ಇದ್ದರೆ ಮಾತ್ರ ರೇಷನ ಕೊಡಲು ನಮಗೆ ಅಧಿಕಾರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ನಾನು ಎಲ್ಲಾ ಗರ್ಭಿಣಿಯರಿಗೆ ರೇಷನ ನೀಡಿದ್ದರೂ ಕೂಡ ನಾನು ಆರೋಪಿತನ ಮಗಳಿಗೆ ರೇಷನ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ನಮ್ಮ ಅಂಗನವಾಡಿಯಲ್ಲಿ ನಮೂದು ಮಾಡಿದರೆ ಮಾತ್ರ ಸಿರುತ್ತದೆ ಎಂದು ನುಡಿಯುತ್ತಾರೆ. ಸದರಿ ತಾಯಿ ಕಾರ್ಡ ನೀಡಲು ನಾನು ತಿರಸ್ಕಾರ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಮಗೆ ಅಧಿಕಾರ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆರೋಪಿತನು ನನಗೆ ರೇಷನ ಕೇಳಲು ಬಂದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆಲವು ರಾಜಕಾರಣಿಯರ ಮಾತು ಕೇಳಿ ಆರೋಪಿತನ ಮಗಳಿಗೆ ರೇಷನ ಮತ್ತು ತಾಯಿ ಕಾರ್ಡ ನೀಡಲು ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ.

**2.** ಸದರಿ ನನ್ನ ಸಹೋದರ ಆರೋಪಿತನ ಮಗಳಿಗೆ ಕಾಲಿನಿಂದ ಒದ್ದಿರುವ ಪರಿಣಾಮವಾಗಿ ಆರೋಪಿತನ ಮಗಳ ಮಗು ಮರಣ ಹೊಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ನನಗೆ ರೇಷನ ಕಿಟ್ಟು ಬಿಟ್ಟು ಏನೂ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-**1** ರಲ್ಲಿ ಬರೆದಿರುವ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಸಂಜೆಃ **5.00** ಗಂಟೆಗೆ ಪೊಲಿಸ ಠಾಣೆಗೆ ಹೋಗಿರುತ್ತೇವೆ. ಸದರಿ ನಾನು ಅಂಗನವಾಡಿಗೆ ಬರುವ ರೇಷನನ್ನು ಮಾರಾಟ ಮಾಡಿರುತ್ತೇನೆ ಎಂದು ಆರೋಪಿತನು ನನ್ನ ಮೇಲಾಧಿಕಾರಿಗಳಿಗೆ ದೂರು ನೀಡಿದ್ದನು ಎಂದರೆ ಸರಿಯಲ್ಲ. ಸದರಿ ಅಂಗನವಾಡಿಯಿಂದ ಬಂದ ಸಾಮಾಗ್ರಿಗಳನ್ನು ನಾನು ಊರಲ್ಲಿರುವ ಅಂಗಡಿಗಳಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ಸದರಿ ವಿಷಯವನ್ನು ಪ್ರಶ್ನಿಸಿದಾಗ ನಾನು ದ್ವೇಷದಿಂದ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬೇರೆ ವ್ಯಕ್ತಿಗಳು ಪ್ರಚೋದನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ, ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಸದರಿ ಪೊಲಿಸರು ಸೀರೆಯನ್ನು ಜಪ್ತಿ ಮಾಡಿರುತ್ತಾರೆ. ನಿಪಿ-**1** ರಲ್ಲಿ ಬರೆದಿರುವ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಆರೋಪಿತನು ಘಟನಾ ಸ್ಥಳದಲ್ಲಿ ಇದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನಾ ಸ್ಥಳದಲ್ಲಿ ನನ್ನ ಕೈಯಲ್ಲಿರುವ ಬಳೆಗಳು ಒಡೆದಿರುತ್ತವೆ. ಸದರಿ ಬಳೆಗಳನ್ನು ಪೊಲಿಸರು ಜಪ್ತಿ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು ಫೊಟೋ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಗಾಯವಾಗದೇ ಇದ್ದರೂ ಕೂಡ ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಃ ಇರುವುದಿಲ್ಲ.</u>

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ